# ಶ್ರೀರಾಮಕೃಷ್ಣರ ಶರಣಾಗತಿ ಯೋಗ

ಪಿ. ಪುರುಷೋತ್ತಮ ಕಾರಂತ

## ಶ್ರೀರಾಮಕೃಷ್ಣರ ಆದರ್ಶ

**ಆ**ಧ್ಯಾತ್ಮಿಕ ಜೀವನದ ವಿವಿಧ ಮಾರ್ಗಗಳಿಗೆ ಪ್ರಾಯೋಗಿಕವಾದ ಸಾಕ್ಷ್ಯನೀಡಿದ ದಿವ್ಯಜೀವನ ಶ್ರೀರಾಮಕೃಷ್ಣರದು. ವೇದೋಪನಿಷತ್ತುಗಳ ಸಾರವಾದ ಸತ್ಯವನ್ನೇ ಜೀವಿಸಿ ತೋರಿಸಿದವರು. ಇವರ ಜೀವನ ಮತ್ತು ಉಪದೇಶಗಳಲ್ಲಿ ಆಧ್ಯಾತ್ಮಿಕ ಜೀವನದ ಹಲವು ಪಥಗಳು ಜೀವಂತವಾಗಿ ಬೆಳಗಿವೆ. ಅವರ ನಡೆನುಡಿಗಳಲ್ಲಿ ಜ್ಞಾನ ಭಕ್ತಿ ವೈರಾಗ್ಯಗಳ ಉಜ್ವಲ ಪ್ರವಾಹವೇ ಹರಿದು ಬರುವುದನ್ನು ನಾವು ಕಾಣುತ್ತೇವೆ. ಹಲವು ಋಷಿಗಳ, ಸಾಧು ಸಂತರ ಹಾಗೂ ಮಹಾತ್ಮರ ಜೀವನಮಾರ್ಗಗಳೆಲ್ಲ ಇಲ್ಲಿ ಒಂದುಗೂಡಿವೆ! ಅವರ ಈ ಉಜ್ವಲ ದಿವ್ಯಜೀವನ ಪ್ರವಾಹದೊಂದಿಗೆ ಓತಪ್ರೋತವಾಗಿ ಹರಿದುಬಂದ ಇನ್ನೊಂದು ಅಂತರ್ಗಾಮಿನಿ ಭಾವಧಾರೆಯನ್ನೂ ನಾವು ಗಮನಿಸಬಹುದು. ಶ್ರೀರಾಮಕೃಷ್ಣರನ್ನು ಸದಾಕಾಲ ಸಮಾಧಿ ಮತ್ತು ಸಹಜ ಭಾವಗಳ ಸಮರಸದಲ್ಲಿ ತೇಲಿಸುತ್ತಿದ್ದದು ಈ ಭಾವಧಾರೆಯೇ ಎಂದು ತೋರುತ್ತದೆ. ಅದು ಯಾವುದೆಂದರೆ, ಅವರು ವಿಶೇಷವಾಗಿ ಹೆಸರಿಸದೆ ಇದ್ದರೂ, ಅವರ ಜೀವನದಲ್ಲಿ ತಾನಾಗಿ ರೂಪುಗೊಂಡು ಮೆರೆದ 'ಶರಣಾಗತಿ.' ಈ ಶರಣಾಗತಿಯ ಮಾರ್ಗವೇ ಅಧ್ಯಾತ್ಮ ಪಿಪಾಸುಗಳಿಗೆ, ಸಾಧಕರಿಗೆ ಮತ್ತು ಸಾಮಾನ್ಯಜೀವರಿಗೆ ಸುರಕ್ಷಿತವೂ ಸುಯೋಗ್ಯವೂ ಆದ ಬೆಳಕಿನ ದಾರಿಯಾಗಿದೆ ಎನ್ನಬಹುದು. ಇದನ್ನು **'ಶರಣಾಗತಿ ಯೋಗ'** ಎನ್ನುವುದೇ ಸೂಕ್ತ.

ಶ್ರೀರಾಮಕೃಷ್ಣರು ಜ್ಞಾನದ ಚರಮಸೀಮೆಯಿಂದ ಸರ್ವಾಂತರ್ಯಾಮಿಯಾದ ಬ್ರಹ್ಮಜ್ಞಾನವನ್ನು ಪಡೆದರು. ವೈರಾಗ್ಯನಿಧಿಯಾಗಿ ಬ್ರಹ್ಮನೊಬ್ಬನೇ ಸತ್ಯ, ಜಗವೆಲ್ಲ ಮಾಯೆಯೆಂದರಿತರು. ಅದೇ ಸಮಯದಲ್ಲಿ ಭಕ್ತನಾಗಿ ಪರಾಭಕ್ತಿಯಿಂದ ಪರಮಾತ್ಮನ ಲೀಲೆಯನ್ನು ಇಡೀ ವಿಶ್ವದಲ್ಲಿ ಕಂಡರು. ಹೀಗಿದ್ದರೂ ತನ್ನಿಂದ ಕೇವಲ ಹುಲ್ಲುಕಡ್ಡಿಯನ್ನೂ ಅಲುಗಿಸಲು ಸಾಧ್ಯವಿಲ್ಲ, ಎಲ್ಲ ಮಾತೆಯ ಇಚ್ಛೆ ಎನ್ನುವ ದೀನತೆ ಮತ್ತು ಪರಿಪೂರ್ಣ ಶರಣಾಗತಿಯ ಭಾವದಿಂದ ತಮ್ಮ ಬಾಳನ್ನು ಸಾಗಿಸಿದರು. ಅವರ ಜೀವನದುದ್ದಕ್ಕೂ ಕ್ಷಣಕ್ಷಣಕ್ಕೂ ಅದೆಂತಹ ಸಮರ್ಪಣಾ ಭಾವವನ್ನು ನಾವು ಕಾಣುತ್ತೇವೆ! ಪೂರ್ಣಜ್ಞಾನಿಯಾಗಿಯೂ, ವಿರಾಗಿಯಾಗಿಯೂ, ಭಕ್ತನಾಗಿಯೂ ಮತ್ತು ಯೋಗಿಯಾಗಿಯೂ ಶ್ರೀರಾಮಕೃಷ್ಣರು ತೋರಿಸಿದ ಇಂತಹ ಶರಣಾಗತಿಯ ಭಾವವನ್ನು ಇಷ್ಟು ಪಕ್ವವಾಗಿ ಇತರ ಮಹಾತ್ಮರ ಜೀವನದಲ್ಲಿ ನಾವು ಕಾಣಲಾರೆವು.

## ಯೋಗಮಾರ್ಗ

ಶರಣಾಗತಿಯು ಸಾಧಕನಿಗೆ ಸುಲಭವೂ ಸುರಕ್ಷಿತವೂ ಆದ ಮಾರ್ಗವಾಗಿದೆ. ಆದ್ದರಿಂದಲೇ ಜ್ಞಾನ, ಭಕ್ತಿ, ಕರ್ಮ ಮತ್ತು ಧ್ಯಾನ ಮಾರ್ಗಗಳಂತೆ ಶರಣಾಗತಿಯೂ ಒಂದು ಯೋಗವೆನಿಸುತ್ತದೆ. ಶ್ರೀರಾಮಕೃಷ್ಣರ ಪವಿತ್ರ ಜೀವನವು ಇಂತಹ ಪರಿಪೂರ್ಣ ಶರಣಾಗತಿಗೆ ಅತ್ಯುತ್ತಮ ಕೈಪಿಡಿಯಂತಿದೆ. ಅವರ ಜೀವನ ಮತ್ತು ಸಂದೇಶಗಳಲ್ಲಿ ಸಾಧಕನು ಎದುರಿಸಬಹುದಾದ ಸಮಸ್ಯೆಗಳಿಗೆ ಪರಿಹಾರವಿದೆ. ಶ್ರೀರಾಮಕೃಷ್ಣರ ಜೀವನವು ಆಧ್ಯಾತ್ಮಿಕ ಜೀವನದ ಹಲವು ಮಾರ್ಗಗಳ ಸಂಗಮವಾದುದರಿಂದಲೇ ಶರಣಾಗತಿಯೂ ಅವರಲ್ಲಿ ತನ್ನ ಪರಿಪೂರ್ಣ ರೂಪದಲ್ಲಿ ಮೈದಳೆದು ಯೋಗವೆನಿಸಿಕೊಳ್ಳುತ್ತದೆ.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಮಾನವ ಜೀವನದ ಸಾರ್ಥಕ್ಯಕ್ಕೆ ಹಲವು ಸಾಧನಾ ಮಾರ್ಗಗಳನ್ನು ವಿವರಿಸಿದ್ದಾನೆ. ಆದರೆ ಪ್ರತಿಯೊಂದರಲ್ಲೂ ಸಾಧಕ ಎದುರಿಸಬೇಕಾದ ಕಷ್ಟಗಳು ಮತ್ತು ಅಸಮರ್ಥತೆಯನ್ನು ಅವನು ಮನಗಂಡಿದ್ದನು. ಆದ್ದರಿಂದ ಸಾರ್ವಕಾಲಿಕವಾದ, ಎಲ್ಲರಿಗೂ ಸಾಧ್ಯವಾಗುವ ಸುಲಭವಾದ ಒಂದು ಮಾರ್ಗವನ್ನು ತನ್ನ ಉಪದೇಶದ ಕಡೆಯಲ್ಲಿ ಅವನು ಅರ್ಜುನನಿಗೆ ಬೋಧಿಸುತ್ತಾನೆ:

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

ಎಲ್ಲ ಧರ್ಮಗಳನ್ನೂ ತ್ಯಜಿಸಿ ನನ್ನೊಬ್ಬನನ್ನೇ ಶರಣುಹೊಂದು. ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಬಿಡಿಸುತ್ತೇನೆ. ಕೊರಗಬೇಡ.

(ಭಗವದ್ಗೀತೆ, ೧೮.೬೬ )

> ಈ ಜಗತ್ತು ಭಗವಂತನದು. ಅವನು ನಮ್ಮನ್ನು ಎಲ್ಲೇ ಇಡಲಿ, ಏನೇ ಮಾಡಲಿ ನಾವದನ್ನು ಸಮಾಧಾನದಿಂದ ತೆಗೆದುಕೊಳ್ಳಬೇಕು. ಶ್ರದ್ಧಾಭಕ್ತಿಗಳಿಂದ ನಾವು ಭಗವಂತನಲ್ಲಿ ಸಂಪೂರ್ಣ ಶರಣಾಗಬೇಕು. ದೇವರಲ್ಲಿ ಭಕ್ತಿಯಿರಿಸಿ, ಅವನ ಚರಣದಲ್ಲಿ ಶರಣಾಗು. ಜನ ಅಹಂಕಾರವಶರಾಗಿ ಎಲ್ಲವನ್ನೂ ತಾವೇ ಮಾಡುವವರು ಎಂದು ತಿಳಿಯುತ್ತಾರೆ. ಅವರು ಭಗವಂತನನ್ನು ಅವಲಂಬಿಸುವುದಿಲ್ಲ. ತನ್ನನ್ನೇ ಅವಲಂಬಿಸಿಕೊಂಡಿರುವವರನ್ನು ಭಗವಂತ ಕಾಪಾಡುತ್ತಾನೆ.
>
> – *ಶ್ರೀಮಾತೆ ಶಾರದಾದೇವಿ*

ಸಾಧಕನಾದವನು ಸಾವಿರಾರು ಸಮಸ್ಯೆಗಳನ್ನು ಎದುರಿಸಿ ತೊಳಲಾಡುತ್ತಾನೆ. ಶರಣಾಗತಿ ಯೋಗವನ್ನು ಬೋಧಿಸುವ ಶ್ರೀಕೃಷ್ಣನ ಈ ಭರವಸೆಯ ಮಾತು ಮತ್ತು ಆ ಮಾರ್ಗಕ್ಕೆ ದಾರಿದೀಪವಾದ ಶ್ರೀರಾಮಕೃಷ್ಣರ ಜೀವನ ಅಪಾರ ಸಾಂತ್ವನವನ್ನು ನೀಡುತ್ತವೆ. ಇಲ್ಲಿ ಎಲ್ಲ ಬಗೆಯ ಯೋಗ ಪ್ರವಾಹಗಳೂ ಸೇರಿ ಪರಿಪಕ್ವವಾಗಿ 'ಶರಣಾಗತಿ' ಎಂಬ ಏಕಭಾವದಲ್ಲಿ ಭಗವಂತನೆಂಬ ಸಾಗರವನ್ನು ಸೇರುವ ಪ್ರಕ್ರಿಯೆಯನ್ನು ನಾವು ಕಾಣುತ್ತೇವೆ.

## ಜಗನ್ಮಾತೆಯ ಉಪಕರಣ

ಶ್ರೀರಾಮಕೃಷ್ಣರ ಜೀವನವಿಡೀ ಅವರು ಜಗನ್ಮಾತೆಯ ಲೀಲಾನಾಟಕದಲ್ಲಿ ಕೇವಲ ಒಂದು ಪಾತ್ರವಾಗಿ, ಯಂತ್ರ ಭಾಗವಾಗಿ, ಉಪಕರಣವಾಗಿ ಮಾತ್ರ ಇರುವುದನ್ನು ಕಾಣ

ಬಿಟ್ಟಿದ್ದು. ಅವರು 'ತನ್ನತನದ' ಛಾಯೆಯೂ ಇಲ್ಲದೆ, ಸದಾ ಭಗವಂತನ ಇಚ್ಛೆಗೆ ಶರಣಾಗಿ ತಮ್ಮ ಇಡೀ ಜೀವನವನ್ನು ಸಾಗಿಸಿದರು. ಲೋಕಪೂಜ್ಯವಾದ ಸ್ಥಾನವನ್ನು ಗಳಿಸಿದರೂ ತಮ್ಮ ಕಾರ್ಯಕಲಾಪಗಳೆಲ್ಲ ಜಗನ್ಮಾತೆಯ ಆಜ್ಞೆಯೆಂದೇ ನಂಬಿ ನಡೆಯುತ್ತಿದ್ದವರು. ತಮ್ಮ ಶಿಷ್ಯಕೋಟಿಯನ್ನು ಕಲೆಹಾಕುವಲ್ಲಿ, ಅವರನ್ನು ತಮ್ಮ ಕಾರ್ಯಕ್ಕೆ ಸಿದ್ಧಗೊಳಿಸುವಲ್ಲಿ ಅವಳನ್ನೇ ನೆಚ್ಚಿಕೊಂಡಿದ್ದವರು. ಭಕ್ತರು ತಮ್ಮಲ್ಲಿ ಏನನ್ನು ಬೇಡಿದರೂ 'ಮಾತೆ ಇಚ್ಛಿಸಿದರೆ ಆಗಲಿ' ಎನ್ನುತ್ತಿದ್ದರೇ ಹೊರತು ತಾವಾಗಿ ಕೊಡುವೆ ಎಂದೆನ್ನುತ್ತಿರಲಿಲ್ಲ. ತಮ್ಮ ಒಳಿತುಕೆಡಕುಗಳನ್ನು ಸುಖಕಷ್ಟಗಳನ್ನು ಜಗನ್ಮಾತೆಯ ಇಚ್ಛೆಯೆಂದೇ ಸ್ವೀಕರಿಸುತ್ತಿದ್ದುದನ್ನು ಅವರ ಜೀವನದಲ್ಲಿ ಕಾಣುತ್ತೇವೆ. ಹೀಗೆ ಶರಣಾಗತಿಯು ಶ್ರೀರಾಮಕೃಷ್ಣರ ಜೀವನದ ಅವಿನಾಭಾವ ಸಂಗತಿಯಾಗಿತ್ತು ಎನ್ನುವುದು ಸ್ಪಷ್ಟವಾಗಿ ನಮಗೆ ಇದರಿಂದ ಗೊತ್ತಾಗುತ್ತದೆ.

> ಯಾತನೆಯ ರಾತ್ರಿಯದು ಕಳೆದುಹೋಯಿತು ನೋಡು
> ಅಹಂ ಭಯಂಕರಭಾವದ ಕನಸು ಕಳೆಯಿತು ಕೊನೆಗೆ
> ಸಾವು ಬದುಕಿನ ಭ್ರಮೆಯು ಇನ್ನೆಂದಿಗೂ ಇಲ್ಲ
> ಅರಿವಿನರುಣೋದಯವ ನೋಡಿ ನಗುವಳು ಮಾತೆ
> ಮಾತೆಯೀಯುವಳಹಹ ಅಭಯವರದಾನ
> ಕೊರಳ ತೆರೆ, ಹಾಡು ನೀ ಅವಳ ಜಯಕಾರ
> ಮೃತ್ಯುವನು ಜಯಿಸಿದಾ ತುತ್ತೂರಿಯೂದು
> ಅನುರಣಿತವಾಗಲದು ಲೋಕಮಾತೆಯ ನಾಮ!
> ತಾಯಿ ಹೇಳುತಲಿಹಳು: 'ಅಳಬೇಡ ಕಂದ,
> ರಾಮಕೃಷ್ಣರ ಪಾದಗಳ ಕಡೆಗೆ ನೋಡು:
> ಆತಂಕ ಕಳೆಯುವುದು, ನೋವಿಲ್ಲದಾಗುವುದು
> ನೋಡು ಮಗು, ನನ್ನೆಡೆಗೆ: ಲೋಕರಕ್ಷಕನಿಲ್ಲಿ
> ದಯೆಯ ದೃಷ್ಟಿಯ ಬೀರಿ ನಿಂತಿಹನು ನೋಡು'.
>
> – *ಗಿರೀಶ್ ಚಂದ್ರ ಘೋಷ್*

### ಜೀವನಧರ್ಮ

ಶರಣಾಗತಿಯ ಭಾವದಲ್ಲಿ ದ್ವೈತ, ಅದ್ವೈತ ಮುಂತಾದ ವೇದಾಂತದ ವಿವಿಧ ಸಿದ್ಧಾಂತಗಳೆಲ್ಲ ಕರಗಿಹೋಗುತ್ತವೆ. ಗೀತೆಯ ಕರ್ಮಫಲತ್ಯಾಗ, ಜ್ಞಾನಿಯ ನಿಸ್ಪೃಹತೆ ಮತ್ತು ಸ್ಥಿತಪ್ರಜ್ಞತೆ, ಭಕ್ತನ ತನ್ಮಯತೆಗಳೆಲ್ಲ ಒಟ್ಟಿಗೆ ಸೇರಿ, ಸಾಧಕನ ಜೀವನವೆಲ್ಲ ಭಗವತ್ಪ್ರಾಪ್ತಿಗಾಗಿ ಒಂದು ಸಾರ್ಥಕ ಹಾಗೂ ಸಮರ್ಥ ದಾರಿಯಾಗುವಂತೆ ಮಾಡುವುದು ಶರಣಾಗತಿ! ಮೇಲ್ನೋಟಕ್ಕೆ ಕಾಣುವಂತೆ, ಶರಣಾಗತಿ ಎನ್ನುವುದು ಅಷ್ಟೊಂದು ಸುಲಭದ ವಿಷಯವಲ್ಲ. 'ಶರಣಾಗಿದ್ದೇನೆ' ಎಂದು ಹೇಳುತ್ತ, ಜವಾಬ್ದಾರಿ ತಪ್ಪಿಸಿಕೊಳ್ಳುವ ಹಾಗಿಲ್ಲ. ಶರಣಾಗತನಾದವನಿಗೆ ತನ್ನ ಒಳಗಿನ ಹಾಗೂ ಹೊರಗಿನ ಆಗುಹೋಗುಗಳೆಲ್ಲವನ್ನೂ ಮತ್ತು ಇದ್ದಕ್ಕಿದ್ದಂತೆ ಇದಿರಾಗುವ ಕಷ್ಟನಷ್ಟಗಳನ್ನೂ ಅನುಭವಿಸುವ ಧೈರ್ಯ ಬೇಕು! ಅವನ ಜೀವನದಲ್ಲಿ ಬಂದದ್ದೆಲ್ಲ ಅವನಿಗೆ ಸ್ವೀಕೃತವೇ ಆಗಬೇಕು! ಬಂದದೆಲ್ಲವೂ ಭಗವಂತನ ಕೊಡುಗೆ ಎಂಬ ಮನೋಭಾವ ಇರಬೇಕು! ಈ ಬಗೆಯ ಧೈರ್ಯ ಮತ್ತು ಸ್ವೀಕಾರ ಮನೋಭಾವವು ಪ್ರಾಮಾಣಿಕವಾಗಿ ಭಗವಂತನಿಗೆ ಶರಣಾಗತನಾದವನಿಗೆ ಮಾತ್ರ ಸಾಧ್ಯ! ಶರಣಾಗತನಾದವನಿಗೆ ತನ್ನ ಇಚ್ಛೆ ಎಂಬುದು ಏನೂ ಉಳಿಯುವುದಿಲ್ಲ! ಆದದ್ದು, ಆಗುತ್ತಿರುವುದು, ಆಗಬಹುದಾದದ್ದು – ಎಲ್ಲವೂ ಭಗವಂತನ ಅನುಗ್ರಹವೇ ಸರಿ ಎಂಬ ಭಾವದಿಂದ ಬೇಕುಬೇಡ ವಿರದ, ಚಿಂತೆತಾಪಗಳಿರದ ಜೀವನವೇ ನಿಜವಾದ ಶರಣಾಗತಿ! ಇದಕ್ಕೆ ನಿದರ್ಶನವಾಗಿ ಒಂದು ಕಥೆಯನ್ನು ಶ್ರೀರಾಮಕೃಷ್ಣರು ತಮ್ಮ ಶಿಷ್ಯರಿಗೆ ಹೇಳುತ್ತಿದ್ದರು.

ಒಬ್ಬ ಬಡ ನೇಯ್ಗೆಯವನು ಒಂದು ಹಳ್ಳಿಯಲ್ಲಿ ವಾಸಿಸುತ್ತಿದ್ದನು. ಅವನೆಂದರೆ ಎಲ್ಲರಿಗೂ ಬಹಳ ನಂಬಿಕೆ ಹಾಗೂ ಪ್ರೀತಿ. ಪೇಟೆಯಲ್ಲಿ ಬಟ್ಟೆಯನ್ನು ಮಾರುವಾಗ "ರಾಮನ ಇಚ್ಛೆಯಿಂದ ದಾರದ ಬೆಲೆ ಒಂದು ರೂಪಾಯಿ. ರಾಮನ ಇಚ್ಛೆಯಿಂದ ಇದರ ಕೂಲಿ ನಾಲ್ಕಾಣೆ, ರಾಮನ ಇಚ್ಛೆಯಿಂದ ಇದರಲ್ಲಿ ಲಾಭ ಎರಡು ಆಣೆ. ಆದ್ದರಿಂದ ರಾಮನ ಇಚ್ಛೆಯಿಂದ ಬಟ್ಟೆಯ ಬೆಲೆ ಒಂದು ರೂಪಾಯಿ ಆರಾಣೆ" ಎಂದು ಅವನು ಗಿರಾಕಿಗಳಿಗೆ ಹೇಳುತ್ತಿದ್ದನು. ಅವನು ಒಂದು ರಾತ್ರಿ ಮನೆಯ ಮುಂದುಗಡೆ ಕುಳಿತು ನಿತ್ಯದಂತೆ ಬಹಳ ಹೊತ್ತು ಭಗವನ್ನಾಮಜಪ ಮಾಡುತ್ತಿದ್ದ. ಆಗ ಒಂದು ದರೋಡೆಕೋರರ ಗುಂಪು ಅತ್ತ ಕಡೆಯೇ ಬಂತು! ಅವರಿಗೆ ಲೂಟಿಯ ಹೊರೆಯನ್ನು ಹೊರುವುದಕ್ಕೆ ಒಬ್ಬ ಆಳು ಬೇಕಿತ್ತು. ಈ ನೇಯ್ಗೆಯವನನ್ನು ಬಲಾತ್ಕಾರವಾಗಿ ಎಳೆದುಕೊಂಡು ಹೋಗಿ ಒಂದು ಮನೆಯನ್ನು ದೋಚಿದರು. ಕದ್ದ ವಸ್ತುಗಳನ್ನು ನೇಯ್ಗೆಯವನ ತಲೆ ಮೇಲೆ ಹೊರಿಸಿದರು. ಅಷ್ಟರಲ್ಲಿ ಪೋಲೀಸರು ಬಂದುದನ್ನು ಕಂಡು ಅವರೆಲ್ಲರೂ ಓಡಿ ಕಣ್ಮರೆಯಾದರು. ನೇಯ್ಗೆಯವನು ಕದ್ದ ವಸ್ತುಗಳೊಂದಿಗೆ ಪೋಲಿಸರ ವಶವಾದ. ಮರುದಿನ ಅವನನ್ನು ನ್ಯಾಯಾಧೀಶನ ಮುಂದೆ ನಿಲ್ಲಿಸಿದರು. ನ್ಯಾಯಾಧೀಶ ನೇಯ್ಗೆಯವನನ್ನು "ಏನು ನಡೆಯಿತು ಹೇಳು?" ಎಂದನು. ಆಗ ಮುಗ್ಧ ನೇಯ್ಗೆಯವನು, "ರಾಮನ ಇಚ್ಛೆಯಿಂದ ರಾತ್ರಿ ನಾನು ಮನೆಯ ಮುಂದೆ ಕುಳಿತು ಜಪ ಮಾಡುತ್ತಿದ್ದೆ, ರಾಮನ ಇಚ್ಛೆಯಿಂದ ಕಳ್ಳರು ನನ್ನನ್ನು ಎಳೆದುಕೊಂಡು ಹೋದರು. ರಾಮನಿಚ್ಛೆಯಿಂದ ನನ್ನ ತಲೆಯ ಮೇಲೆ ತಮ್ಮ ಲೂಟಿಯ ಹೊರೆಯನ್ನು ಹೊರಿಸಿದರು. ಆಗ ರಾಮನಿಚ್ಛೆಯಿಂದ ಪೋಲೀಸರು ಬಂದು ನನ್ನನ್ನು ಬಂಧಿಸಿದರು. ರಾಮನಿಚ್ಛೆಯಿಂದ ಈಗ ನಿಮ್ಮ ಎದುರಿಗೆ ನಿಲ್ಲಿಸಿದ್ದಾರೆ, ಪ್ರಭೂ" ಎಂದ. ನ್ಯಾಯಾಧೀಶ ಅವನ ಮುಗ್ಧತೆಯನ್ನು ಕಂಡು ಅವನು ನಿರಪರಾಧಿಯೆಂದು ಬಿಟ್ಟುಬಿಟ್ಟನು. ಆಗ ಆತ "ಆಹಾ! ರಾಮನಿಚ್ಛೆಯಂತೆ ನನ್ನನ್ನು ಬಿಡುಗಡೆ ಮಾಡಿದರು" ಎಂದುಕೊಂಡು ಹೊರಟುಹೋದನು.

ಹೀಗೆ ಶರಣಾಗತನು ದ್ವಂದ್ವಾತೀತನಾಗಿರುತ್ತಾನೆ. ಅವನು ಯಾವುದಕ್ಕೆ ತಾನೇ ಕಾಳಜಿ ಪಡುತ್ತಾನೆ? ಭಗವಂತನ ಇಚ್ಛೆಯ ಎದುರು ಕ್ಷುದ್ರ 'ನಾನು' ಮತ್ತು 'ನನ್ನದು' ಎನ್ನುವುದು ಅವನನ್ನು ಏನು ತಾನೇ ಮಾಡೀತು?! ಇದನ್ನು ಮನಗಂಡರೆ ಮಾತ್ರ 'ಶರಣಾಗತಿ' ಅರ್ಥಯುಕ್ತ ಮತ್ತು ಫಲಪ್ರದವಾಗುತ್ತದೆ. ಅದರಿಂದ ಕೂಡಿದ ಬಾಳು ನಿರ್ಭೀತ, ತೃಪ್ತ ಮತ್ತು ಆನಂದಮಯ ಸಹಜ ಜೀವನವೇ ಆಗುತ್ತದೆ. ■